C.R.P.67

Form No.4 (Civil)
Deposition Sheets
(R.P.No.57)

**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.**

ಎಸ್ ಸಿ ಸಂಖ್ಯೆಃ**31/2015**

ಪ್ರಮಾಣ ವಚನ ಬೋಧಿಸಿದ ದಿನಾಂಕಃ **24.02.2025**

ಪಾಟೀ ಸವಾಲುಃ ಶ್ರೀ ಎಂ.ಬಿ.ಎಸ್ ವಕೀಲರಿಂದ **1** ನೇ ಆರೋಪಿತನ ಪರವಾಗಿಃ

ಚಾಸಾ-1 ಮತ್ತು 3 ರವರು ಗೊತ್ತು. ಚಾಸಾ-4 ರಂದ 6 ರವರು ಗೊತ್ತಿಲ್ಲ. ಚಾಸಾ-1 ಮತ್ತು 3 ರವರು ನನ್ನ ಜೊತೆ ಟಿ.ಡಿ.ಪಿ.ಎಸ್. ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ನಾವು ಕಂಪನಿಯಲ್ಲಿ ಕೆಲಸ ಮಾಡುವುದಕ್ಕೆ ಕಂಪನಿಯವರು ನಮಗೆ ಎಂಪ್ಲಾಯಿ ಐ.ಡಿ.ಕಾರ್ಡ್ ನ್ನು ನೀಡುತ್ತಾರೆ ಎಂದರೆ ಸರಿ. ನಾನು ಮತ್ತು ಚಾಸಾ-1 ಮತ್ತು 3 ರವರು ನಮ್ಮ ಎಂಪ್ಲಾಯಿ ಐ.ಡಿ. ಕಾರ್ಡ್ ನ್ನು ಪೊಲೀಸರಿಗೆ ನೀಡಿರುವುದಿಲ್ಲ. ನಾವು ಕಂಪನಿಯಲ್ಲಿ ಕೆಲಸ ಮಾಡುವ ಬಗ್ಗೆ ಕಂಪನಿಯಲ್ಲಿ ಅಂಟೆಂಡೆನ್ಸ್ ಮತ್ತು ಮೂಮೆಂಟ್ ರಿಜಿಸ್ಟರ್ ಇರುತ್ತದೆ ಎಂದರೆ ಸರಿ. ದಿನಾಂಕಃ12.02.2014 ರಿಂದು ನಾನು ಮತ್ತು ಚಾಸಾ-1 ಮತ್ತು 3 ರವರು ಕಂಪನಿಯಲ್ಲಿ ಕೆಲಸ ಮಾಡಿದ ಬಗ್ಗೆ ಸದರಿ ರಿಜಿಸ್ಟರ್ ಅನ್ನು ಪೊಲೀಸರ ಮುಂದೆ ಹಾಜರುಪಡಿಸಿರಿವುದಿಲ್ಲ. ನಮ್ಮ ಕಂಪನಿಯವರು ಕುರುಕ್ಷೇತ್ರ ನಾಟಕ ಇಟ್ಟುಕೊಂಡಿದ್ದಾಗ ಆ ಬಗ್ಗೆ ಪಾಂಪ್ಲಟ್ ಅನ್ನು ಸಾರ್ವಜನಿಕರಿಗೆ ಹಂಚಿದ್ದರು ಎಂದರೆ ಸರಿ. ಸದರಿ ಪಾಂಪ್ಲೇಟ್ ಅನ್ನು ನಾವು ಪೊಲೀಸರಿಗೆ ನೀಡಿರುವುದಿಲ್ಲ. ಕುರುಕ್ಷೇತ್ರ ನಾಟಕದಲ್ಲಿ ನಮ್ಮ ಕಂಪನಿಯ ಕಾರ್ಮಿಕರು ಯಾರ್ಯಾರು ಯಾವ ಪಾತ್ರವನ್ನು ವಹಿಸಿದ್ದರು ಮತ್ತು ಅವರ ಹೆಸರು, ವಿಳಾಸ ನನಗೆ ಗೊತ್ತಿರುವುದಿಲ್ಲ ಎಂದರೆ ಸರಿ.

2. 2014 ರಲ್ಲಿ ನನಗೆ ರೂ.10,000/- ಸಂಬಳ ಬರುತ್ತಿತ್ತು. ನಾನು 2010 ರಲ್ಲಿ ಸದರಿ ಕಂಪನಿಗೆ ಕೆಲಸಕ್ಕೆ ಸೇರಿಕೊಂಡಿರುತ್ತೇನೆ. ಕಂಪನಿಯವರು ಸಂಬಳವನ್ನು ನನ್ನ ಬ್ಯಾಂಕ್ ಅಕೌಂಟಿಗೆ ಹಾಕುತ್ತಿದ್ದರು ಎಂದರೆ ಸರಿ. ಘಟನೆ ನೆಡಯಿತು ಎಂದು ಹೇಳಲಾದ ತಿಂಗಳಿನ ನನ್ನ ಬ್ಯಾಂಕ್ ಸ್ಟೇಟ್ ಮೆಂಟ್ ಅನ್ನು ನಾನು ಪೊಲೀಸರಿಗೆ ನೀಡಿರುವುದಿಲ್ಲ. ಆ ದಿವಸ ಕುರುಕ್ಷೇತ್ರ ನಾಟಕ ರಾತ್ರಿ 8.00 ಗಂಟೆಗೆ ಶುರುವಾಗಿರುತ್ತದೆ. ನಾಟಕ ನಡೆಯುತ್ತಿದ್ದ ಸ್ಥಳದಿಂದ ದಾಬಸ್ ಪೇಟೆ ಬಸ್ ನಿಲ್ದಾಣಕ್ಕೆ 500 ಮೀಟರ್

ದೂರ ಆಗುತ್ತದೆ. ನಾನು ಪ್ರತೀ ದಿವಸ ಕಂಪನಿಯ ವಾಹನವದಲ್ಲಿ ಕೆಲಸಕ್ಕೆ ಹೋಗುತ್ತಿದ್ದೆ. ಆ ದಿವಸ ಕುರುಕ್ಷೇತ್ರ ನಾಟಕ ಆಯೋಜಿಸಿದ್ದರಿಂದ ಕಂಪನಿಯವರು ನಮ್ಮನ್ನು ಮನೆಗೆ ವಾಪಸ್ಸು ಬಿಡಲು ವಾಹನ ವ್ಯವಸ್ಥೆಯನ್ನು ಮಾಡಿದ್ದರು ಎಂದರೆ ಸಾಕ್ಷಿ ಮನೆಗೆ ವಾಪಸ್ಸು ಹೋಗಲು ಯಾವುದೇ ವಾಹನದ ವ್ಯವಸ್ಥೆ ಮಾಡಿರಲಿಲ್ಲ ಎಂದು ಹೇಳುತ್ತಾರೆ. ಕಂಪನಿಯವರು ಆ ದಿವಸ ಮನೆಗೆ ವಾಪಸ್ಸು ಹೋಗಲು ವಾಹನ ವ್ಯವಸ್ಥೆ ಮಾಡಿದ್ದರೂ ಸಹ ಈಗ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. ಘಟನೆ ನಡೆದ ಸಂದರ್ಭದಲ್ಲಿ ನಾನು ತುಮಕೂರಿನಲ್ಲಿ ಒಂದು ಬಾಡಿಗೆ ಮನೆಯಲ್ಲಿ ವಾಸಮಾಡಿಕೊಂಡಿದ್ದೆ. ನಾನು ತಿಂಗಳಿಗೆ 1,500/- ರೂಪಾಯಿ ಬಾಡಿಗೆ ಕಟ್ಟುತ್ತಿದ್ದೆ. ದಾಬಸ್ ಪೇಟೆ ಬಸ್ ಸ್ಟ್ಯಾಂಡ್ ಸುತ್ತ ಮುತ್ತ ಏನೇನು ಇರುತ್ತದೆ ಎಂದರೆ ಸಾಕ್ಷಿ ಬೇಕರಿ, ಜ್ಯೂವೆಲ್ಲರೀ ಷಾಪ್, ದೊಡ್ಡಬಳ್ಳಾಪುರ ರಸ್ತೆ, ತುಮಕೂರು-ಬೆಂಗಳೂರು ರಸ್ತೆ ಹಾಗೂ ಹೆಚ್.ಡಿ.ಎಫ್.ಸಿ. ಬ್ಯಾಂಕ್ ಇರುತ್ತದೆ ಎಂದು ಹೇಳುತ್ತಾರೆ. ಸಾಮಾನ್ಯವಾಗಿ ಸದರಿ ಜ್ಯೂವೆಲ್ಲರೀ ಷಾಪ್ ಮತ್ತು ಹೆಚ್.ಡಿ.ಎಫ್.ಸಿ. ಬ್ಯಾಂಕ್ ಮುಂದೆ ಸೆಕ್ಯೂರಿಟಿ ಗಾರ್ಡ್ ಇರುತ್ತಾರೆ ಎಂದರೆ ಸರಿ. ಸದರಿ ಜ್ಯೂವೆಲ್ಲರೀ ಷಾಪ್ ಮತ್ತು ಹೆಚ್.ಡಿ.ಎಫ್.ಸಿ. ಬ್ಯಾಂಕ್ ನವರು ಸಿ.ಸಿ.ಟಿ.ವಿಯನ್ನು ಅಳವಡಿಸಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಸದರಿ ಸ್ಥಳದಲ್ಲಿ ಸಿ.ಸಿ.ಟಿ.ವಿ.ಯನ್ನ ಅಳವಡಿಸಿರುವ ವಿಚಾರ ನನಗಗೆ ಗೊತ್ತಿದ್ದರೂ ಸಹ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

4. ಚಾಸಾ-1 ರವರು ನೀಡಿದ ದೂರಿನಲ್ಲಿ ಟಾಟಾ ಮ್ಯಾಜಿಕ್ ಗಾಡಿಯ ನಂಬರು ಮತ್ತು ಅದರ ಬಣ್ಣವನ್ನು ಹೇಳಿ ಬರೆಸಿರುವುದಿಲ್ಲ ಎಂದರೆ ಸರಿ. ಸದರಿ ವಿಚಾರವನ್ನು ನನ್ನ ಹೇಳಿಕೆಯಲ್ಲಿ ಹೇಳಿರುವುದಿಲ್ಲ ಎಂದರೆ ಸರಿ. ನನ್ನನ್ನು ಮತ್ತು ಚಾಸಾ-1 ರವರನ್ನು ಚಂದನಾ ಹೊಸಹಳ್ಳಿ ಹತ್ತಿರ ಕರೆದುಕೊಂಡು ಹೋಗಿ ಅಲ್ಲಿ ನಮ್ಮಿಬ್ಬರನು ಗಾಡಿಯಿಂದ ಹೊರಕ್ಕೆ ನೂಕಿದರು ಎಂದು ಹೇಳಲಾದ ಸಂದರ್ಭದಲ್ಲಿ ನಾನು ಗಾಡಿಯ ನಂಬರ್ ಮತ್ತು ಬಣ್ಣವನ್ನು ನೋಡಿರುವುದಿಲ್ಲ ಎಂದರೆ ಸರಿ. ನನ್ನನ್ನು ಮತ್ತು ಚಾಸಾ-1 ರವರನ್ನು ಟಾಟ ಮ್ಯಾಜಿಕ್ ಗಾಡಿಯಲ್ಲಿ ಕರೆದುಕೊಂಡು ಹೋದ ವ್ಯಕ್ತಿಗಳನ್ನು ನಾನು ಮೊದಲು ನೋಡಿರಲಿಲ್ಲ ಮತ್ತು ಅವರ ಪರಿಚಯ ನನಗೆ ಇರಲಿಲ್ಲ ಎಂದರೆ ಸರಿ. ನನ್ನ ದೂರಿನಲ್ಲಿ ಯಾವ ಕಂಪನಿಯ ಮೊಬೈಲ್ ಫೋನ್ ಅನ್ನು ನನ್ನಿಂದ ಕಿತ್ತುಕೊಂಡರು ಎಂದು ನಮೂದು ಮಾಡಿರುವುದಿಲ್ಲ ಎಂದರೆ ಸರಿ. ನನಗೆ ಆ ದಿವಸ ಹಲ್ಲೆ

ಆಗಿದ್ದ ಬಗ್ಗೆ ನಾನು ಮತ್ತು ಚಾಸಾ-1 ರವರು ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದುಕೊಂಡಿಲ್ಲ ಎಂದರೆ ಸರಿ. ಆ ದಿವಸ 3,700/- ರೂ ನನ್ನ ಬಳಿ ಇತ್ತು ಎಂದು ತೋರಿಸಲು ನಾನು ಯಾವುದೇ ದಾಖಲೆಯನ್ನು ಪೊಲೀಸರಿಗೆ ನೀಡಿರುವುದಿಲ್ಲ. ನಾನು ಬ್ಯಾಂಕಿನಿಂದ ಎಟಿಎಂ ಕಾರ್ಡನ್ನು ಪಡೆದುಕೊಂಡಿರುತ್ತೇನೆ. ಆದರೆ ಆ ದಿವಸ ನಾನು ಎಟಿಎಂ ಕಾರ್ಡನ್ನು ತೆಗೆದುಕೊಂಡು ಹೋಗಿರಲಿಲ್ಲ. ಹೆಚ್.ಡಿ.ಎಫ್.ಸಿ. ಬ್ಯಾಂಕ್ ಎಟಿಎಂ ನಲ್ಲಿ ಸಿಸಿಟಿವಿ ಕ್ಯಾಮೆರಾ ವನ್ನು ಅಳವಡಿಸಿದ್ದರು, ಎಂಟಿಎಂ ನಲ್ಲಿ ಸೆಕ್ಯೂರಿಟಿ ಕಾಬಿನ್ ಇರುತ್ತದೆ ಮತ್ತು ಸೆಕ್ಯೂರಿಟಿ ಗಾರ್ಡ್ ಇರುತ್ತಾರೆ ಎಂದರೆ ಸಾಕ್ಷಿ ನಾನು ವಾಹನದ ಒಳಗಡೆ ಕುಳಿತಿದ್ದೆ ಎಂದು ಹೇಳುತ್ತಾರೆ. ಆ ದಿವಸ ನಾನು ವಾಹದಲ್ಲಿ ಕುಳಿತಿದ್ದರಿಂದ ಆರೋಪಿತರನ್ನು ನಾನು ನೋಡಿರುವುದಿಲ್ಲ ಎಂದರೆ ಸರಿಯಲ್ಲ. ಆ ದಿವಸ ಆರೋಪಿತರು ಚಾಸಾ-1 ರವರನ್ನು ಬಲವಂತವಾಗಿ ಎಂಟಿಎಂ ನೊಳಗೆ ಹಣ ಡ್ರಾ ಮಾಡಲು ಕರೆದುಕೊಂಡು ಹೋದರು ಎಂದು ಹೇಳಲಾದ ಸಂದರ್ಭದಲ್ಲಿ ಆರೋಪಿತರು ನನ್ನನ್ನು ಒತ್ತೆ ಆಳಾಗಿ ಇಟ್ಟುಕೊಂಡಿರಲಿಲ್ಲ ಎಂದರೆ ಸರಿಯಲ್ಲ. ನಾನು ಆ ಸಂದರ್ಭದಲ್ಲಿ ಸಾರ್ವಜನಿಕರಿಂದ ಸಹಾಯ ಪಡೆಯಲು ಪ್ರಯತ್ನ ಪಟ್ಟಿರುವುದಿಲ್ಲ ಎಂದರೆ ಸರಿಯಲ್ಲ.

5. ದಿನಾಂಕ 12.02.2014 ರಾತ್ರಿ 1.30 ಗಂಟೆ ಸಮಯದಲ್ಲಿ ದಾಬಸ್ ಪೇಟೆ ಬಸ್ ನಿಲದಣದ ಬಳಿ ಆರೋಪಿತರು ಇರಲಿಲ್ಲ, ಸದರಿ ಸ್ಥಳದಿಂದ ಆರೋಪಿತರು ನನ್ನನ್ನು ಮತ್ತು ಚಾಸಾ-1 ರವರನ್ನು ಟಾಟಾ ಮ್ಯಾಜಿಕ್ ವಾಹನದಲ್ಲಿ ಕರೆದುಕೊಂಡು ಹೋಗಲಿಲ್ಲ, ಆರೋಪಿತರು ನನಗೆ ಚಾಕು ತೋರಿಸಿ ನನ್ನ ಬಳಿಯಿದ್ದ ಹಣ ಮತ್ತ ಮೊಬೈಲ್ ಫೋನ್ ಮತ್ತು ಎಟಿಎಂ ಕಾರ್ಡ್ ಗಳನ್ನು ಕಿತ್ತುಕೊಂಡಿರುವುದಿಲ್ಲ ಮತ್ತು ಎಟಿಎಂ ಬಳಿ ನನ್ನನ್ನು ಕರೆದುಕೊಂಡು ಹೋಗಿ ಮೂರು ಬಾರಿ ಬಲವಂತವಾಗಿ ನನ್ನ ಕಡೆಯಿಂದ ಹಣ ಡ್ರಾ ಮಾಡಿಸಿರುವುದಿಲ್ಲ, ನನ್ನನ್ನು ಮತ್ತು ಚಾಸಾ-1 ರವರನ್ನು ದಾಬಸ್ ಪೇಟೆಯಿಂದ ಚಂದನ ಹೊಸಹಳ್ಳಿ ಹತ್ತಿರ ಕರೆದುಕೊಂಡು ಹೋಗಿ ನಮ್ಮಿಬ್ಬರನ್ನು ಗಾಡಿಯಿಂದ ಹೊರಕ್ಕೆ ನೂಕಿರುವುದಿಲ್ಲ ಎಂದರೆ ಸರಿಯಲ್ಲ.

6. ಆರೋಪಿತರು ನನ್ನನ್ನು ಟಾಟಾ ಮ್ಯಾಜಿಕ್ ವಾಹನದಲ್ಲಿ ಕರೆದುಕೊಂಡು ಹೋದರು ಮತ್ತು ಎಟಿಎಂ ಗೆ ಕರೆದುಕೊಂಡು ಹೋಗಿ ಬಲವಂತವಾಗಿ ಹಣವನ್ನು ನನ್ನಿಂದ ಡ್ರಾ ಮಾಡಿಸಿದರು ಎಂದು ಹೇಳಲಾದ ಸಂದರ್ಭದಲ್ಲಿ ನನ್ನ ಕೈ ಕಟ್ಟಿದ್ದರಾ ಮತ್ತು ಬಾಯಿಗೆ ಬಟ್ಟೆ ತುರುಕಿದ್ದರಾ ಎಂದರೆ ಸಾಕ್ಷಿ ಕೈ ಮತ್ತು ಬಾಯನ್ನು ಬಟ್ಟೆಯಿಂದ ಕಟ್ಟಿರಲಿಲ್ಲ ಆದರೆ ಬೆದರಿಕೆ ಹಾಕಿದ್ದರು ಎಂದು ಹೇಳುತ್ತಾರೆ.

ಆರೋಪಿತರು ನಮಗೆ ಬೆದರಿಕೆ ಹಾಕಿದ್ದರು ಎಂಬ ವಿಚಾರವನ್ನು ನನ್ನ ದೂರಿನಲ್ಲಿ ಮತ್ತು ನನ್ನ ಹೇಳಿಕೆಯಲ್ಲಿ ಹೇಳಿರುವುದಿಲ್ಲ ಎಂದರೆ ಸರಿ.

7. ನಿಪಿ-2 ಸ್ಥಳ ಮಹಜರ್ ಮಾಡುವ ಸಮಯದಲ್ಲಿ ಪೊಲೀಸರು ಸ್ಥಳೀಯರನ್ನು ಪಂಚರಾಗಿ ಕರೆದರಾ ಎಂದರೆ ಸರಿ. ಚಾಸಾ-3 ರವರನ್ನು ಸ್ಥಳಕ್ಕೆ ನಾನೇ ಕರೆದುಕೊಂಡು ಹೋಗಿರುತ್ತೇನೆ ಎಂದರೆ ಸರಿ. ನಿಪಿ-2 ನ್ನು ಪೊಲೀಸರು ಠಾಣೆಯಲ್ಲೇ ತಯಾರು ಮಾಡಿರುತ್ತಾರೆ, ನಾನು, ಚಾಸಾ-1 ಮತ್ತು 3 ರವರು ಠಾಣೆಗೆ ಹೋಗಿ ನಿಪಿ-2 ಕ್ಕೆ ಸಹಿ ಮಾಡಿರುತ್ತೇವೆ ಎಂದರೆ ಸರಿಯಲ್ಲಿ. ನಿಪಿ-2 ದಾಖಲೆಯನ್ನು ಬರೆದ ಪೊಲೀಸ್ ಅಧಿಕಾರಿಯ ಹೆಸರು ನನಗೆ ಗೊತ್ತಿಲ್ಲ. ನಿಪಿ-3 ರಂತೆ ಹೆಚ್.ಡಿ.ಎಫ್.ಸಿ. ಬ್ಯಾಂಕ್ ಎಟಿಎಂ ಕೊಠಡಿ ಬಳಿ ಮಹಜರ್ ಮಾಡುವಾಗ ಅಲ್ಲಿದ್ದ ಸ್ಥಳೀಯರನ್ನು ಪಂಚರಾಗಿ ಬರಬೇಕು ಎಂದು ಕರೆದಿರುವುದಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ನಿಪಿ-3 ರಂತೆ ಮಹಜರ್ ಮಾಡುವ ಸಮಯದಲ್ಲಿ ಎಟಿಎಂ ಬಳಿ ಸೆಕ್ಯೂರಿಟಿ ಗಾರ್ಡ್ ಇದ್ದರೋ ಇಲ್ಲವೋ ಎಂದರೆ ನನಗೆ ಗೊತ್ತಿಲ್ಲ. ಹೆಚ್.ಡಿ.ಎಫ್.ಸಿ. ಬ್ಯಾಂಕ್ ಎಟಿಎಂ ಪ್ರವೇಶ ದ್ವಾರದಲ್ಲಿ ಸಿಸಿಟಿವಿ ಕ್ಯಾಮೆರಾ ಇರುತ್ತದೆ ಎಂದರೆ ಸರಿ. ದಿನಾಂಕ:13.02.2014 ರಂದು ನಾನು ಹೆಚ್.ಡಿ.ಎಫ್.ಸಿ. ಎಟಿಎಂ ಬಳಿ ಹೋಗಿರುವುದಿಲ್ಲ, ಅಲ್ಲಿ ನಿಪಿ-3 ರಂತೆ ಯಾವುದೇ ಮಹಜರ್ ಕ್ರಮ ಜರುಗಿಸಿರುವುದಿಲ್ಲ, ನಿಪಿ-3 ಕ್ಕೆ ನಾನು ಪೊಲೀಸ್ ಠಾಣೆಯಲ್ಲೇ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಪೊಲೀಸರು ನನ್ನನ್ನು ಹೂಡಿಗೆರೆ ಹೋಬಳಿ ಪಂಡಿತನಹಳ್ಳಿಬಾರೆ ಬಳಿಗೆ ಕರೆದುಕೊಂಡು ಹೋಗಿರುವುದಿಲ್ಲ ಅಲ್ಲಿ ನಿಪಿ-4 ರಂತೆ ಯಾವುದೇ ವಹುಜರ್ ಕ್ರಮ ಜರುಗಿಸಿರುವುದಿಲ್ಲ, ನಾನು ನಿಪಿ-4 ಕ್ಕೆ ಪೊಲೀಸ್ ಠಾಣೆಯಲ್ಲೇ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

8. ನನ್ನ ಮುಖ್ಯ ವಿಚಾರಣೆಯಲ್ಲಿ ಪೊಲೀಸರು ನಮ್ಮನ್ನು ಪೊಲೀಸ್ ವಾಹನದಲ್ಲಿ ತುಮಕೂರು ಗೇಟ್ ಗೆ ಕರೆದುಕೊಂಡು ಹೋಗುತ್ತಿದ್ದಾಗ ಅಲ್ಲಿ ಒಂದು ಆಂಬ್ಯುಲೆನ್ಸ್ ನಿಂತಿತ್ತು, ಅಲ್ಲಿ ಒಬ್ಬ ಲಾರಿ ಡ್ರೈವರ್ ಗೆ ಮಾರಣಾಂತಿಕ ಹಲ್ಲೆ ಮಾಡಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತೀರಾ ಸದರಿ ಅಂಬ್ಯುಲೆನ್ಸ್ ನಂಬರ್ ಮತ್ತು ಲಾರಿ ನಂಬರ್ ಮತ್ತು ಯಾವ ಕಂಪನಿಯ ಲಾರಿ ಮತ್ತು ಎಷ್ಟು ಟೈಯರ್ ಅನ್ನು ಬಿಚ್ಚಿಕೊಂಡು ಹೋಗಿದ್ದರು ಎಂದು ನಿಮಗೆ ಗೊತ್ತಾ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ನನ್ನನ್ನು ಪೊಲೀಸರು ಆ ದಿವಸ ಸ್ಥಳಕ್ಕೆ ಕರೆದುಕೊಂಡು ಹೋಗುತ್ತಿದ್ದರು ಎಂದು ಹೇಳಲಾದ

ಸಂದರ್ಭದಲ್ಲಿ ಸದರಿ ಆಂಬ್ಯುಲೆನ್ಸ್ ಮತ್ತು ಲಾರಿ ಚಾಲಕನನ್ನು ನಾನು ನೋಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ದೂರಿನಲ್ಲಿ ಉಳಿದ ಆರೋಪಿಗಳು ಬಜಾಜ್ ಚೇತಕ್ ವಾಹನದಲ್ಲಿ ಬಂದಿದ್ದರು ಎಂದು ನಮೂದು ಮಾಡಿರುವುದಿಲ್ಲ ಎಂದರೆ ಸರಿ. ನಾನು ಪೊಲೀಸರ ಮುಂದೆ ನೀಡಿದ ಹೇಳಿಕೆಯಲ್ಲಿ ಸದರಿ ಸ್ಕೂಟರಿನ ನಂಬರ್ ಹೇಳಿರುವುದಿಲ್ಲ ಎಂದರೆ ಸರಿ. ಆ ದಿವಸ ಯಾವುದೇ ಆರೋಪಿಗಳು ಯಾವುದೇ ಸ್ಕೂಟರಿನಲಿಲ ಅಲ್ಲಿಗೆ ಬಂದಿರಲಿಲ್ಲ ಆದ್ದರಿಂದ ನಾನು ನನ್ನ ದೂರಿನಲ್ಲಿ ಮತ್ತು ನನ್ನ ಹೇಳಿಕೆಯಲ್ಲಿ ಆ ಬಗ್ಗೆ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ಪೊಲೀಸರು ನನ್ನನ್ನು ಕಾರಾಗೃಹಕ್ಕೆ ಕರೆದುಕೊಂಡು ಹೋಗಿ ಗುರುತು ಕಾವಾಯತಿನ ಪ್ರಕ್ರಿಯೆಯನ್ನು ನಡೆಸಿರುವುದಿಲ್ಲ. ಘಟನೆ ನಡೆಯಿತು ಎಂದು ಹೇಳಲಾದ ಹದಿನೈದು ದಿನದ ನಂತರ ಪೊಲೀಸರು ನನ್ನನ್ನು ಠಾಣೆಗೆ ಕರೆಸಿ ಆರೋಪಿತರನ್ನು ತೋರಿಸಿ ಅವರ ಹೆಸರು ಮತ್ತು ವಿಳಾಸವನ್ನು ಪೊಲೀಸರು ನನಗೆ ತಿಳಿಸಿದಾಗ ಆರೋಪಿತರ ಬಗ್ಗೆ ನನಗೆ ಗೊತ್ತಾಯಿತು ಎಂದರೆ ಸರಿಯಲ್ಲ. ಆರೋಪಿತರನ್ನು ನಾನು ನ್ಯಾಯಾಲಯದ ಮುಂದೆ ಮಾತ್ರ ನೋಡಿರುತ್ತೇನೆ ಅವರನ್ನು ಈ ಮೊದಲು ನೋಡಿರುವುದಿಲ್ಲ ಎಂದರೆ ಸರಿಯಲ್ಲ. ಪೊಲೀಸರು ಠಾಣೆಗೆ ನನ್ನನ್ನು ಕರೆಸಿರುವುದಿಲ್ಲ, ಅಲ್ಲಿ ಯಾವುದೇ ಆರೋಪಿಯನ್ನು ತೋರಿಸಿ ನನಗೆ ಗುರುತು ಹಚ್ಚಲು ಹೇಳಿರುವುದಿಲ್ಲ ಮತ್ತು ಯಾವುದೇ ವಾಹವನ್ನು ತೋರಿಸಿ ಗುರುತಿಸಲು ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ಪೊಲೀಸರು ಠಾಣೆಯಲ್ಲಿ ನನಗೆ ಯಾವುದೇ ಚಾಕವನ್ನು ತೋರಿಸಿರುವುದಿಲ್ಲ ಎಂದರೆ ಸರಿಯಲ್ಲ. ಪೊಲೀಸರು ನನಗೆ ಠಾಣೆಯಲ್ಲಿ ಎರಡು-ಮೂರು ಚಾಕುಗಳನ್ನು ತೋರಿಸಿರುತ್ತಾರೆ. ಸದರಿ ಚಾಕುಗಳು ಎಷ್ಟು ಉದ್ದ ಮತ್ತು ಅಗಲ ಇತ್ತು ಮತ್ತು ಅದರಿ ಹಿಡಿಕೆ ಬಗ್ಗೆ ನನಗೆ ಈಗ ಹೇಳಲು ಆಗುವುದಿಲ್ಲ.

9. ಪೊಲೀಸರು ನನ್ನನ್ನು ಪುನಃ ನೆಲಮಂಗಲ ಪೊಲೀಸ್ ಠಾಣೆಗೆ ಕರೆಸಿರಲಿಲ್ಲ ಮತ್ತು ಠಾಣೆಯಲ್ಲಿ ನನಗೆ ಯಾವುದೇ ಆರೋಪಿಯನ್ನು ತೋರಿಸಿ ಗುರುತು ಹಚ್ಚಲು ಹೇಳಿರಲಿಲ್ಲ ಎಂದರೆ ಸರಿಯಲ್ಲ. ದಾಬಸ್ ಪೇಟೆ-ತುಮಕೂರು ರಸ್ತೆಯಲ್ಲಿ ಸಾಕಷ್ಟು ವಾಹನಗಳು ಓಡಾಡುತ್ತಿರುತ್ತವೆ ಎಂದರೆ ಸರಿ. ನಾನು ಆ ದಿವಸ ಬೇರೆ ಸಾರ್ವಜನನಿಕರನ್ನು ಸಂಪರ್ಕಿಸಿ ನಮಗೆ ತೊಂದರೆ ಕೊಡುತ್ತಿರುತ್ತಾರೆ ಸಹಾಯ ಮಾಡಿ ಎಂದು ಕೇಳಿರುವುದಿಲ್ಲ. ನಾನು ಹೇಳಿದ ರೀತಿ ಯಾವುದೇ ಘಟನೆ ನಡೆದಿರುವುದಿಲ್ಲ, ನಾನು ಪೊಲೀಸರು ತಯಾರು ಮಾಡಿಕೊಟ್ಟ ದೂರಿನ ಅನುಗುಣವಾಗಿ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣದ ವಿಚಾರವಾಗಿ ನಾನು ಪೊಲೀಸ್ ಠಾಣೆಗೆ 3-4 ಬಾರಿ

ಹೋಗಿರುತ್ತೇನೆ. ನಾನು ಪೊಲೀಸ್ ಠಾಣೆಗೆ ಹೋದಾಗ ಪೊಲೀಸರು ಐದಾರು ದಾಖಲೆಗೆ ನನ್ನ ಸಹಿ ಪಡೆದುಕೊಂಡಿರುತ್ತಾರೆ.

ಪಾಟೀ ಸವಾಲುಃ ಶ್ರೀ ಜಿ.ಎಸ್.ಬಿ ವಕೀಲರಿಂದ **4** ಮತ್ತು **5** ನೇ ಆರೋಪಿತರ ಪರವಾಗಿಃ

10. ಪೊಲೀಸರು ವಶಪಡಿಸಿಕೊಂಡ ಮೊಬೈಲ್ ನನ್ನದಲ್ಲ ಆದ್ದರಿಂದ ನಾನು ಸದರಿ ವಸ್ತುಗಳನ್ನು ಬಿಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ವಸ್ತುಗಳು ನನ್ನದು ಎಂದು ತೋರಿಸಲು ನಾನು ಯಾವುದೇ ದಾಖಲೆಯನ್ನು ಪೊಲೀಸರಿಗೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನನ ಎಟಿಎಂ ಕಾರ್ಡ್ ಗಳು ನನ್ನ ಬಳಿಯೇ ಇರುತ್ತದೆ, ಆರೋಪಿತರು ಅದನ್ನು ಉಪಯೋಗಿಸಿ ಯಾವುದೇ ಹಣವನ್ನು ಡ್ರಾ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಮು.ಮಾ.1 ವಾಚನ್ನು ಕೇಸಿನ ಸಲುವಾಗಿ ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿತರಿಗೂ ಮತ್ತು ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲದಿದ್ದರೂ ಸಹ, ನಾನು ಪೊಲೀಸರ ಮಾತನ್ನು ಕೇಳಿಕೊಂಡು ಆರೋಪಿತರ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

11. 4 ಮತ್ತು 5 ನೇ ಆರೋಪಿತರ ಪರ ವಕೀಲರು 1 ನೇ ಆರೋಪಿ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

ಮರುವಿಚಾರಣೆ - ಇಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ.

(ರವೀಂದ್ರ. ಆರ್)
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.